ಒಂದಾಣೆ ಮಾಲೆ 76

ಕ್ರಾಂತಿ ಕಂಠೀರವ

ಭಗತ್ ಸಿಂಘ



ಕ್ರಾಂತಿಕಂಠೀರವ ಭಗತ್ ಸಿಂಘ್.

ಬೆಲೆ: ಒಂದಾಣೆ.

1956

ಲೇಖಕ:
ಶ್ರೀ ಸತ್ಯಾಶ್ರಯ ಕಾಮತ್
ಕಿನ್ನಿಗೋಳಿ.

ಒಂದಾಣೆ ಮಾಲೆ — ಮಂಗಳೂರು.

'ಒಂದಾಣೆ ಮಾಲೆ'ಯ ಪ್ರಕಟಣೆಗಳು:

ಕ್ರಾಂತಿಕಂಠೀರವ ಭಗತ್‌ಸಿಂಘ್

ಸ್ವಾತಂತ್ರ್ಯಪೂರ್ವದ ೧೯೩೧ನೇ ವರ್ಷವು ಬಿಳಿಯರಾದ ಬ್ರಿಟಿಷರ ಬದ್ಧಮುಷ್ಟಿಯಿಂದ ಭಾರತವನ್ನು ವಿಮೋಚನೆಗೊಳಿಸಿದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚಿರಸ್ಮರಣೀಯವಾದ ವರ್ಷ. ಅದು, ಭಗತ್‌ಸಿಂಘ್ ಮತ್ತವನ ಗೆಳೆಯರು ಬ್ರಿಟಿಷ್ ಚಕ್ರಾಧಿಪತಿಗಳೊಡನೆ ಎದೆಗೊಟ್ಟು ಸೆಣಸಾಡಿದ ಕ್ರಾಂತಿಕಾಲ. ಭಾರತಮಾತೆಯ ಬಂಧವಿಮೋಚನೆಯ ಏಕಮಾತ್ರ ಉದ್ದೇಶವನ್ನು ತಮ್ಮ ಬಗೆಯ ಬಯಕೆಯನ್ನಾಗಿ ಮಾಡಿ ಅದಕ್ಕಾಗಿ ದುಡಿದು ಮಡಿದು ಹುತಾತ್ಮರಾದ ಈ ದೇಶವೀರ ತರುಣರನ್ನು ಇಂದಿಗೂ ನಾಡಿಗೆ ನಾಡೇ ಮುಕ್ತಕಂಠದಿಂದ ಕೊಂಡಾಡುತ್ತಿರುವುದು. ಅವರ ಪುಣ್ಯಸ್ಮರಣೆಯನ್ನು ಪುಣ್ಯಭೂಮಿ ಭಾರತದ ಪ್ರಜೆಗಳೆಲ್ಲರೂ ಹಗಲಿರುಳು ಸ್ಮರಿಸಿ ವೀರಾವೇಶವನ್ನು ತಾಳಿ ಕೃತಕೃತ್ಯರಾಗುತ್ತಿರುವರು.

ಹುಟ್ಟು ಕ್ರಾಂತಿವೀರನಾಗಿದ್ದ ಭಗತ್ ಸಿಂಘನ ಕ್ರಾಂತಿಮಯಜೀವನವನ್ನು ಚೆನ್ನಾಗಿ ಮನವರಿತುಕೊಳ್ಳಲು ಆಗಿನ ಕಾಲದ ರಾಜಕೀಯ ವಾತಾವರಣದ ಸನ್ನಿವೇಶಗಳ ಆಗುಹೋಗುಗಳ ವಿಷಯವಿವೇಚನೆಯು ಅತ್ಯಗತ್ಯವಿದೆ. ಭಗತ್‌ಸಿಂಘನ ಕಾಲದಲ್ಲಿ ಲೋಕವೆಂಬುದು ಪ್ರಥಮ ಮಹಾಯುದ್ಧದ ಪ್ರಕ್ಷೋಭೆಗೊಳಗಾಗಿತ್ತು. ಸಮಗ್ರ ಜಗತ್ತು ರಾಷ್ಟ್ರರಾಷ್ಟ್ರಗಳ ವೈಷಮ್ಯಗಳಿಂದ ಬಾಹ್ಯವಾಗಿಯೂ, ಅತ್ಯಾಚಾರ, ಅನಾಚಾರ, ಅನೈತಿಕತೆ ಕುಟಿಲೋಪಾಯಗಳಿಂದ ಆಂತರಿಕವಾಗಿಯೂ ತಲ್ಲಣಿಸಿ ತಳಮಳಗೊಳ್ಳುತ್ತಿತ್ತು. ಸಾಮ್ರಾಜ್ಯಶಾಹಿ ಮತ್ತು ಭಂಡವಾಳಶಾಹಿಯ ಶೋಷಣೆಗಳನ್ನು ಕಂಡು ರೊಚ್ಚಿಗೆದ್ದ ಜನತೆಯು ರಾಜರನ್ನೂ ರಾಜ್ಯಗಳನ್ನೂ ಉರುಳಿಸುತಿತ್ತು. ರಷ್ಯಾ ದೇಶದಲ್ಲಿ ಮಜೂರ ಸರಕಾರದ ಸ್ಥಾಪನೆಯಾಗಿತ್ತು.

ಅಂದಿನ ಭಾರತದಲ್ಲಿ ಕ್ರಾಂತಿಯ ಹಿನ್ನೆಲೆ

ಜಗತ್ತಿನ ಇತರ ರಾಷ್ಟ್ರಗಳಲ್ಲಿ ಹುಟ್ಟಿದ್ದ ಕ್ರಾಂತಿಯ ಕಾಳ್ಗಿಚ್ಚು ಭಾರತವನ್ನು ತಟ್ಟದೆ ಬಿಟ್ಟಿರಲಿಲ್ಲ. ರಾಲೆಟ್ ಕಾನೂನನ್ನು ಜಾರಿಗೆ ತಂದು ಭಾರತಾಂಬೆಯ ಪುನೀತವಕ್ಷಸ್ಥಳವನ್ನು ಒದೆದು ಅವಳ ಮಕ್ಕಳಾದ ನಮ್ಮ

ಬಾಂಧವರ ರಕ್ತದ ಓಕುಳಿಯಾಡಿದ ಬ್ರಿಟಿಷರ ವಿರುದ್ಧವಾಗಿ ಜನರಲ್ಲಿ ಕ್ರೋಧಾಗ್ನಿ ಪ್ರಜ್ವಲಿಸಿತು. ಅಂದಿನ ಈ ಬ್ರಿಟಿಷರ ದುರ್ವ್ಯವಹಾರವೇ ಭಾರತದ ಭಾವೀಸ್ವಾತಂತ್ರ್ಯದ ಪ್ರಖರಸಂಗ್ರಾಮಕ್ಕೆ ಭದ್ರವಾದ ಅಡಿಗಲ್ಲಾಯಿತು. ಗಾಂಧಿಜಿಯವರು ಅಹಿಂಸಾತ್ಮಕ ಅಸಹಕಾರ ಆಂದೋಲನದ ಕ್ರಾಂತಿಕಹಳೆಯನ್ನೂದಿ "ಒಂದು ವರ್ಷದೊಳಗೆ ದೇಶವನ್ನು ಪಾರತಂತ್ರ್ಯದಿಂದ ಪಾರುಗೊಳಿಸುವೆ"ನೆಂದು ಸಾರಿದರು. ದೇಶದಾದ್ಯಂತ ಶಾಲೆ, ಕಾಲೇಜುಗಳು ಮುಚ್ಚಲ್ಪಟ್ಟವು. ಬಡವರಾದ ರೈತಾಪಿ ಜನರ ಉದರಾಗ್ನಿಯು ಪ್ರಳಯಾಗ್ನಿಯಾಗಿ ಮಾರ್ಪಟ್ಟು ಚೌರೀಚೌರದಲ್ಲಿ ಇಪ್ಪತ್ತೆರಡು ಮಂದಿ ಬ್ರಿಟಿಷ್ ಪೊಲೀಸರನ್ನು ಬಲಿಗೊಂಡಿತು. ಜನರ ಚಳವಳವು ಹಿಂಸೆಯ ಕರಾಳರೂಪವನ್ನು ಧರಿಸಲು, ಮಹಾತ್ಮಾ ಗಾಂಧಿಜಿಯವರು "ಇಂತಹ ಹಿಂಸಾತ್ಮಕ ಕಾರ್ಯಕ್ರಮಗಳನ್ನು ಕೊನೆಗಾಣಿಸಿರಿ" ಎಂದು ಜನತೆಗೆ ಕರೆಯಿತ್ತರು. ಪೂಜ್ಯ ಬಾಪೂಜಿಯವರ ಅಮರಸಂದೇಶವನ್ನು ಕೇಳಿ ಚದರಿದ ಭಾರತದ ತರುಣಯೋಧರು ಭಾರತಮಾತೆಯ ದಾಸ್ಯ ಶೃಂಖಲೆಗಳನ್ನು ಕಳಚಿ ಕಿತ್ತೊಗೆಯಲು ಟೊಂಕಕಟ್ಟಿ ಅಣಿ ನೆರೆದರು. ಹಿಂದೆ ಕ್ರಾಂತಿಕೇಸರಿಯಾಗಿ ಮೆರೆದು ಭಾರತದ ಧವಳಕೀರ್ತಿಯನ್ನು ಆಚಂದ್ರಾರ್ಕ ತಾರೆಯಾಗಿ ಮಾಡಿದ ರಣಜಿತ್ ಸಿಂಘನ ನೆಲೆಯಾಗಿದ ಪಂಜಾಬೇ ಇಂದು ಈ ಸ್ವಾತಂತ್ರ್ಯಶೂರರ ಪುನರ್ಮಿಲನ ಪುನರ್ಸಂಘಟನೆಗಳಿಗೆ ಸ್ಫೂರ್ತಿಗಂಗೆಯಾಯ್ತು. ಪಂಜಾಬಿನಲ್ಲಿ ಸ್ವಾತಂತ್ರ್ಯಸಂಗ್ರಾಮದ ಪೀಠಿಕೆಯನ್ನು ಹಾಕಲು ನೆರೆದಿದ್ದ ಈ ತರುಣರಲ್ಲಿ ಭಗತ್‌ಸಿಂಘನೂ ಒಬ್ಬನಾಗಿದ್ದನು.

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" (ಮನು).
(ಜನನಿ ಮತ್ತು ಜನ್ಮಭೂಮಿಗಳು ಸ್ವರ್ಗಕ್ಕಿಂತಲೂ ಹೆಚ್ಚಿನವುಗಳು).

ಭಗತ್ ಸಿಂಘನು ಲಾಹೋರಿನಿಂದ ತುಸು ದೂರದಲ್ಲಿರುವ ಸಾಂಡ ಗ್ರಾಮದಲ್ಲಿನ ಓರ್ವ ಸಿಖ್ ರೈತನ ಮಗನು. ಇವನ ಪಿತನಾದ ಸರ್ದಾರ್ ಕಿಶನ್ ಸಿಂಘನು ಜಾತ್ ಕುಲದವನಾಗಿದ್ದು ಆರ್ಯಸಮಾಜಕ್ಕೆ ಸೇರಿದವನಾಗಿದ್ದನು. ಎಳವೆಯಿಂದಲೂ ಭಗತ್ ಸಿಂಘನ ಮನಸ್ಸು ಬ್ರಿಟಿಷರ ದಬ್ಬಾಳಿಕೆಯನ್ನು ಕಂಡು ಎಡೆಬಿಡದೆ ಕುದಿಕುದಿಯುತಿತ್ತು. ಬ್ರಿಟಿಷರ ಹಿಂಸೆ ದುರಾಡಳಿತೆಗಳಿಂದ ಪರಿಣಮಿಸಿದ ಹಲವಾರು ದುರ್ಘಟನೆಗಳೂ ರೌಲೆಟ್

ಕಾನೂನಿಗೆ ವಿರೋಧವಾಗಿ ಲಾಹೋರಿನಲ್ಲಿ ನಡೆದ ಮತಪ್ರದರ್ಶನಗಳೂ, ಹನ್ನೆರಡು ವರ್ಷದ ಬಾಲಕ ಭಗತ್ ಸಿಂಘನ ಮನಸ್ಸಿನ ಮೇಲೆ ಅಳಿಯಲಾರದ ಅಚ್ಚನ್ನೊತ್ತಿದುವು.

ಈ ಘಟನೆಯು ನಡೆದ ಎರಡೇ ವರ್ಷಗಳಲ್ಲಿ ಭಗತ್ ಸಿಂಘನು ಸ್ವಯಂಸೇವಕನಾಗಿ ಕೊಂಗ್ರೆಸಿನಲ್ಲಿ ಸೇರಿಕೊಂಡನು. ಸಿಕ್ಖರ ಗುರುದ್ವಾರದ ಚಳವಳದಲ್ಲಿಯೂ ಪ್ರಮುಖಪಾತ್ರವನ್ನು ವಹಿಸಿದನು. ಭಗತ್ ಸಿಂಘ್ ಮತ್ತವನ ಗೆಳೆಯರು ಹೂಡಿದ ಈ ಚಳವಳದ ಫಲಶ್ರುತಿಯಾಗಿ ಗುರುದ್ವಾರದ ಆಡಳಿತೆಯು ಕೆಲವೊಂದು ಗುರುಗಳ ಕೈಯಿಂದ ತಪ್ಪಿ, ಸಮಿತಿಯ ಅಧಿಕಾರಕ್ಕೆ ಒಳಗಾಯಿತು.

ತನ್ನ ಪ್ರೌಢವಿದ್ಯಾಭ್ಯಾಸವನ್ನು ಮುಗಿಸಿದ್ದ ಭಗತ್ ಸಿಂಘನು ಉಚ್ಚಶಿಕ್ಷಣಕ್ಕೋಸ್ಕರ ಪಂಜಾಬದ ರಾಷ್ಟ್ರೀಯ ಕಲಾಶಾಲೆಯನ್ನು ಸೇರಿದನು. ಇಲ್ಲಿಯೇ ಅವನಿಗೆ ತನ್ನ ಭಾವೀ ಪ್ರಾಣಮಿತ್ರರಾಗಿ ಪರಿಣಮಿಸಿದ ಸುಖದೇವ ಮತ್ತಿತರರ ಪರಿಚಯವಾಯಿತು. ಕಲಾಶಾಲೆಯಲ್ಲಿ ಭಗತ್ ಸಿಂಘನು ಉಳಿದ ವಿಷಯಗಳಿಗಿಂತ ಸಂಸ್ಕೃತ ಮತ್ತು ಉರ್ದು ಭಾಷೆಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿ, ಅವುಗಳೆರಡರಲ್ಲಿ ಪಾಂಡಿತ್ಯಪಡೆದನು. ಇವೆರಡು ಭಾಷೆಗಳು ಅವನ ಜೀವಮಾನವಿಡೀ ನಚ್ಚಿನ ಭಾಷೆಗಳಾಗಿ ಉಳಿದುವು. ಕಲಾಶಾಲೆಯಲ್ಲಿರುವಾಗ ಭಗತ್ ಸಿಂಘನು ತನ್ನ ಬಿಡುಸಮಯವನ್ನು ಬೇರೆಬೇರೆ ರಾಷ್ಟ್ರಗಳ ಕ್ರಾಂತಿಯ ಇತಿಹಾಸವನ್ನು ಓದಲು ಕಳೆಯುತಿದ್ದನು. ಅವನ ಈ ಆಳವಾದ ವ್ಯಾಸಂಗದ ಪ್ರತಿಫಲವಾಗಿ ಉದಯೋನ್ಮುಖವಾದ ಚಿರಂತನಸ್ಫೂರ್ತಿಯು ಭೂಗತ ಚಟುವಟಿಕೆಗಳಿಂದ ಕೂಡಿದ ಕ್ರಾಂತಿಕಾರಿ ಪಕ್ಷವನ್ನು ರಚಿಸುವಂತೆ ಅವನನ್ನು ಪ್ರೇರೇಪಿಸಿತು.

ಹೆತ್ತ ತಾಯಿಯ, ಹೊತ್ತ ಜನ್ಮಭೂಮಿಯ, ಸೇವೆಯೇ ನಿಸ್ವಾರ್ಥಸೇವೆ.

೧೯೨೫ರಲ್ಲಿ ಭಗತ್ ಸಿಂಘನ ರಾಜಕೀಯ ಚಟುವಟಿಕೆಗಳು "ನಾಜವಾನ್ ಭಾರತ್ ಸಭಾ" (ತರುಣ ಭಾರತೀಯರ ಸಂಘ)ವೆಂಬ ನವನಾಮಧೇಯ ಸಂಸ್ಥೆಯ ಆಶ್ರಯದಲ್ಲಿ ರೂಪುವಡೆದುವು. ಇದಕ್ಕಾಗಿ ಲಾಹೋರಿನಲ್ಲಿ ಪ್ರಥಮ ಸಭೆಯನ್ನು ಜರಗಿಸಿ ಸಂಘಸಂಸ್ಥಾಪನೆಯ ಅಡಿಗಲ್ಲನ್ನು

ಇರಿಸಲಾಯ್ತು. ಭಗತ್ ಸಿಂಘನನ್ನು ನೌಜವಾನ್ ಸಭೆಯ ಕಾರ್ಯದರ್ಶಿಯನ್ನಾಗಿಯೂ ಭಗವತಿ ಚರಣ ವೋರಾನನ್ನು ಪ್ರಚಾರಕಾರ್ಯದರ್ಶಿಯನ್ನಾಗಿಯೂ ಆರಿಸಲಾಯ್ತು. ಧನ್ವಂತರಿ ಮತ್ತಿತರರು ಸಭೆಯ ಉತ್ಸಾಹೀ ಕಾರ್ಯಕರ್ತರಾದರು. ಅದೇ ವರ್ಷ ಸಭೆಯ ಸದಸ್ಯರೆಲ್ಲರೂ ಪುನಃ ಒಟ್ಟು ಸೇರಿ ಹುತಾತ್ಮನಾದ ಕರ್ತಾರ ಸಿಂಘನ ಪುಣ್ಯತಿಥಿಯನ್ನು ಸಾರ್ವಜನಿಕವಾಗಿ ಆಚರಿಸಿದುದಲ್ಲದೆ ಲಾಹೋರಿನ ಬ್ರ್ಯಾಡ್‌ಲೋ ಭವನದಲ್ಲಿ ಅವನ ಭಾವಚಿತ್ರ ಅನಾವರಣ ಮಾಡಿ ಬ್ರಿಟಿಷ್ ದೊರೆಗಳಿಗೆ ತಮ್ಮ ದಿಟ್ಟತನದ ಪರಿಚಯವನ್ನು ಚೆನ್ನಾಗಿ ಮಾಡಿಕೊಟ್ಟರು.

ಬೆಳೆಯುತಿದ್ದ ನೌಜವಾನ್ ಸಭೆಯನ್ನು ಸುದೃಢಗೊಳಿಸಲು ಭಗತ್ ಸಿಂಘನು ಉತ್ತರ ಪ್ರದೇಶದ ಕ್ರಾಂತಿಕಾರಿ ಸಂಘಗಳೊಡನೆ ಸಂಬಂಧವನ್ನು ಬೆಳೆಸಿಕೊಂಡನು. ಸಭೆಯ ಸಂಘಟನಾಕಾರ್ಯಗಳಿಗಾಗಿ ಅವನಿಗೆ ಆಗಾಗ್ಗೆ ಕಾನಪುರ ಮೊದಲಾದ ಸ್ಥಳಗಳನ್ನು ಸಂದರ್ಶಿಸಬೇಕಾಗುತಿತ್ತು. ಭಗತ್ ಸಿಂಘನು ಧಿಲ್ಲಿಯಲ್ಲಿರುವಾಗ ಅರ್ಜುನವೆಂಬ ಉರ್ದು ವರ್ತಮಾನ ಪತ್ರಿಕೆಯಲ್ಲೂ ಕಾನಪುರದಲ್ಲಿರುವಾಗ 'ಪ್ರತಾಪ'ವೆಂಬ ವೃತ್ತ ಪತ್ರಿಕೆಯಲ್ಲೂ ವಿಪ್ಲವಕಾರಿ ಲೇಖನಗಳನ್ನಿತ್ತು ಲೇಖನ ಕಲೆಯಲ್ಲಿ ತನ್ನ ಕೈ ನುರಿಸಿಕೊಂಡನು.

೧೯೨೭ನೇ ಇಸವಿಯ ದಸರಾ ಸಮಯ. ಲಾಹೋರಿನ ಬೀದಿಯೊಂದರಲ್ಲಿ ಬಾಂಬುವೊಂದರ ಸ್ಫೋಟನವಾಯ್ತು. ಈ ದುಷ್ಕೃತ್ಯದಲ್ಲಿ ಭಗತ್ ಸಿಂಘ ಮತ್ತು ಅವನ ಗೆಳೆಯರ ಕೈವಾಡವಿಲ್ಲದಿದ್ದರೂ ದೋಷಾರೋಪಣೆಗಾಗಿ ಕಣ್ಣಲ್ಲಿ ಎಣ್ಣೆ ಹಾಕಿ ಕಾಯುತಿದ್ದ ಶ್ವೇತಸರಕಾರವು, ಭಗತ್ ಸಿಂಘ್ ಮತ್ತವನ ಗೆಳೆಯರನ್ನೆ ಗೊಂದಲಗಾರರೆಂದು ಸಾರಿ, ಅವನನ್ನೇ ಸೆರೆಮನೆಗೆ ತಳ್ಳಿತು. ಎರಡು ವಾರಗಳನಂತರ ೬೦,೦೦೦ ರೂಪಾಯಿಗಳ ಜಾಮೀನಿನ ಮೇಲೆ ಅವನನ್ನು ಬಿಡುಗಡೆ ಮಾಡಲಾಯ್ತು.

ಪ್ರಜಾಸತ್ತಾತ್ಮಕ ಸಮಾಜವಾದಿ ಸಂಘದ ಸ್ಥಾಪನೆ.

೧೯೨೮ನೇ ಸಪ್ಟೆಂಬರ ಮಾಸದಲ್ಲಿ ಕ್ರಾಂತಿಕಾರಿಗಳ ಬಹುಮುಖ ಚಟುವಟಿಕೆಗಳು ಅಧಿಕವಾಗಿ, ಅವರ ಕಾರ್ಯಕ್ಷೇತ್ರವು ವಿಶಾಲವಾಗಲು, ಉತ್ತರ ಪ್ರದೇಶ, ಪಂಜಾಬ್, ರಜಪುತಾನ, ಮತ್ತು ಬಿಹಾರ್ ಪ್ರಾಂತಗಳಲ್ಲಿ

ಬ್ರಿಟಿಷರಿಗೆ ಸಿಂಹಸ್ವಪ್ನವಾಗಿ ಪರಿಣಮಿಸಿದ್ದ ಕ್ರಾಂತಿವೀರರಾದ ಭಗತ್ ಸಿಂಘ್, ಸುಖದೇವ, ವಿಜಯಕುಮಾರ ಸಿನ್ಹಾ ಮತ್ತು ಶಿವವರ್ಮರು ಢಿಲ್ಲಿಯ ಫಿರೋಜಶಹಾ ಕೋಟ್ಲವೆಂಬಲ್ಲಿ ಸಭೆಸೇರಿದರು. ಎರಡು ದಿನಗಳ ಅವಿಶ್ರಾಂತ ವಿಚಾರವಿನಿಮಯದ ಫಲರೂಪವಾಗಿ 'ಭಾರತೀಯ ಪ್ರಜಾಸತ್ತಾತ್ಮಕ ಸಂಘ'ವು ತಲೆದೋರಿತು. ಕಾರ್ಯಕಾರಿಮಂಡಳಿಯನ್ನು ರಚಿಸಿ ಬಿ. ಕೆ. ಸಿನ್ಹಾ, ಮತ್ತು ಭಗತ್ ಸಿಂಘರನ್ನು ಸಂಘದ ಸಂಘಟಕರನ್ನಾಗಿ ನೇಮಿಸಲಾಯ್ತು.

ಭಾರತವನ್ನು ಬ್ರಿಟಿಷರ ಕಪಿಮುಷ್ಟಿಯಿಂದ ವಿಮೋಚನೆಗೊಳಿಸಿ ಅದನ್ನು ಪ್ರಜಾಸತ್ತಾತ್ಮಕ ಸಮಾಜವಾದಿ ಸ್ವರೂಪದಲ್ಲಿ ಕಟ್ಟುವುದೇ ಭಗತ್ ಸಿಂಘ್ ಮತ್ತವನ ಸಂಗಡಿಗರು ಈ ಸಂಘವನ್ನು ಸ್ಥಾಪಿಸಿದುದರ ಮುಖ್ಯೋದ್ದೇಶವಾಗಿತ್ತು. ಇದಕ್ಕೆ ಬೇಕಾದ ಅನುಭವವನ್ನು ಭಗತ್ ಸಿಂಘನು 'ಕೀರ್ತಿ'ಯೆಂಬ ಸಮಾಜವಾದಿ ಪತ್ರಿಕೆಯನ್ನು ನಡೆಸುತಿದ್ದಾಗಲೂ, ಪರರಾಷ್ಟ್ರಗಳ ಕ್ರಾಂತಿಮಯ ಜೀವನವನ್ನು ಓದಿಯೂ ಗಳಿಸಿಕೊಂಡಿದ್ದನು. ಅವನ ಕಲ್ಪನೆಯ ಸಮಾಜವಾದವು ಕೇವಲ ರಾಜಕೀಯ ಸ್ವಾತಂತ್ರ್ಯವನ್ನಲ್ಲದೆ ಆರ್ಥಿಕಸ್ವಾತಂತ್ರ್ಯವನ್ನೂ ಘೋಷಿಸುತಿತ್ತು. ಮಾನವ-ಮಾನವರಲ್ಲಿರುವ ಏರುತಗ್ಗುಗಳು ಅಳಿದು ಜನತೆಯಲ್ಲಿ ಸುಖ-ಸಂತೃಪ್ತಿಗಳು ನಕ್ಕುನಲಿದಾಡಬೇಕೆಂಬುದೇ ಅವನ ಜೀವನದ ಪ್ರಧಾನ ಗುರಿಯಾಗಿತ್ತು.

ಪಂಜಾಬ್ ಕೇಸರಿ ಲಾಲಾ ಲಜಪತರಾಯರ ನಿಧನ: ಸೋಂಡರ್ಸ್ ವಧೆ

ಹೊಚ್ಚ ಹೊಸತಾಗಿ ಸ್ಥಾಪನೆಯಾಗಿದ್ದ ಈ ಸಂಘದ ಸದಸ್ಯರಿಗೆ ತಮ್ಮ ಶಕ್ತಿಪ್ರದರ್ಶನಕ್ಕೆ ಯೋಗ್ಯಕಾಲವು ಒದಗಿ ಬಂದುದು ೧೯೨೮ರಲ್ಲಿ ಸೈಮನ್ ಕಮಿಶನು ಭಾರತಕ್ಕೆ ಬಂದಾಗ. ಇಷ್ಟರಲ್ಲಿ ಪಂಡಿತ್ ನೆಹ್ರೂರವರು ತನ್ನ ರಷ್ಯಾಪ್ರವಾಸವನ್ನು ಮುಗಿಸಿ ಬಂದಿದ್ದರು. ಸುಭಾಸ್‌ಚಂದ್ರಬೋಸರನ್ನು ಕಾರ್ಯದರ್ಶಿಯನ್ನಾಗಿ ಆರಿಸಿದ ಕೊಂಗ್ರೆಸು ಎಡಪಕ್ಷದ ಭಾವನೆಗಳಿಂದ ತುಂಬಿಕೊಂಡಿತ್ತು. ಆ ವರ್ಷಾಂತ್ಯದಲ್ಲೇ ಬ್ರಿಟಿಷ್ ಸರಕಾರವು ಸೈಮನ್ ಕಮಿಶನನ್ನು ಭಾರತಕ್ಕೆ ಕಳುಹಿಸಲಿದೆ ಎಂದು ತಿಳಿದೊಡನೆ ಸಮಗ್ರದೇಶದಲ್ಲೆಲ್ಲಾ ಕ್ರಾಂತಿಯ ರಣಕಹಳೆಯು ಮೊಳಗಿತು.

ಕಲ್ಕತ್ತಾ ನಗರದಲ್ಲಿ ಕಮಿಶನಿನ ಸದಸ್ಯರ ಕಾರುಗಳು ಹಾದುಹೋಗದಂತೆ ಕ್ರಾಂತಿಕಾರಿಗಳೆಲ್ಲಾ ರಸ್ತೆಗಳನ್ನು ಮುಚ್ಚಿದರು. ಲಾಹೋರಿನಲ್ಲಿ ನೌಜವಾನ್ ಭಾರತ ಸಭೆಯವರು ಇತಿಹಾಸದಲ್ಲೇ ಅದ್ವಿತೀಯವಾದ ಚಳವಳವನ್ನು ಹೂಡಿದರು. ಪಂಜಾಬಿನ ಕೇಸರಿ ಲಾಲಾ ಲಜಪತರಾಯರ ನೇತೃತ್ವದಲ್ಲಿ ಹೊರಟ ಮತಪ್ರದರ್ಶನದ ಮೆರವಣಿಗೆಯು ನಗರದ ರೈಲ್ವೆ ಫ್ಲ್ಯಾಟ್‌ಫೋರ್ಮನ್ನು ತಲಪಿದೊಡನೆ ಏಕಕಂಠದಿಂದ 'ಸೈಮನನೇ, ಹಿಂದೆರಳು, ಕ್ರಾಂತಿಯು ಚಿರಕಾಲ ಬಾಳಲಿ' ಎಂಬ ಜಯಘೋಷವನ್ನು ಹಾಡಿತು. ನಿರಾಶರಾದ ಪೋಲೀಸರು ಲಾಠಿಪ್ರಯೋಗವನ್ನು ಮಾಡಿ ಜನಸಂದಣಿಯನ್ನು ಚದರಿಸಿದರು. ಮೆರವಣಿಗೆಯ ಮುಂದಾಳುತನವನ್ನು ವಹಿಸಿಕೊಂಡಿದ್ದ ಲಜಪತರಾಯರ ತಲೆಯ ಮೇಲೂ ಲಾಠಿಏಟುಗಳು ಬಿದ್ದು, ಅವರ ಪರಿಸ್ಥಿತಿಯು ಚಿಂತಾಜನಕವಾಯ್ತು. ಈ ದುರ್ಘಟನೆಯು ಅದೇ ವರ್ಷದ ನವೆಂಬರ ೧೭ರಲ್ಲಿ ಅವರ ಅಕಾಲಮೃತ್ಯುವಿಗೆ ಕಾರಣವಾಯ್ತು.

ಲಾಲಾಜಿಯವರಿಗುಂಟಾದ ಅಪಮೃತ್ಯುವಿನಿಂದ, ಜನತೆಯಲ್ಲಿ ಉರಿಯುತ್ತಿರುವ ಬೆಂಕಿಗೆ ತುಪ್ಪವನ್ನೆರಚಿದಂತಾಯ್ತು. ದೇಶದ ಹಿರಿಯ ನಾಯಕರಲ್ಲಿ ಹಲವರು ಬ್ರಿಟಿಷರ ವಿರುದ್ಧ ಸೇಡನ್ನು ತೀರಿಸಿಕೊಳ್ಳಲು ಹಿಂಜರಿದರೂ, ತರುಣಕ್ರಾಂತಿಕಾರಿಗಳಾಗಿದ್ದ ಭಗತ್‌ಸಿಂಘ್ ಮತ್ತವನ ಗೆಳೆಯರಿಗೆ ರಾಷ್ಟ್ರದ ಹಿರಿಯ ಧುರೀಣರೊಬ್ಬರಿಗಾದ ಅಪಮಾನವನ್ನು ಕಂಡು ಸಹಿಸಲಾಗಲಿಲ್ಲ. ಲಾಠಿಪ್ರಯೋಗವನ್ನು ಮಾಡಲು ಆಜ್ಞೆಯಿತ್ತ ಡಿಪ್ಯುಟಿ ಸುಪರಿಂಟೆಂಡೆಂಟ್ ಸೋಂಡರ್ಸನಿಗೆ ಬುದ್ಧಿಕಲಿಸದ ಹೊರತು ಅವರ ಬಿಸಿ ರಕ್ತವು ತಣಿಯಲಿಲ್ಲ. ಭಗತ್‌ಸಿಂಘ್ ಮತ್ತವನ ಗೆಳೆಯರೆಲ್ಲರೂ ಸೊಂಡರ್ಸನ ಕೊಲೆಗೆ ಹಂಚಿಕೆ ಹೂಡಿದರು. ೧೯೨೮ನೇ ದಶಂಬರ ೧೭ರಂದು ಸಂಜೆ, ಸೊಂಡರ್ಸನು ಲಾಹೋರಿನ ಡಿ. ಎ. ವಿ. ಕೊಲೇಜಿನ ಬಳಿಯಲ್ಲಿದ್ದ ತನ್ನ ಆಫೀಸಿನಿಂದ ಮೋಟಾರ್ ಸೈಕಲನ್ನೇರಿ ತನ್ನ ಮನೆಗೆ ಹಿಂದೆರಳುತಿದ್ದನು. ಮನೆಯ ಗೇಟನ್ನು ತಲಪಿ ಮೋಟಾರ್ ಸೈಕಲಿನಿಂದ ಕೆಳಗಿಳಿದುದೇ ತಡ, ಅಲ್ಲೇ ಅವಿತುಕೊಂಡಿದ್ದ ರಾಜಗುರುವು ತನ್ನ ಕೈಯಲ್ಲಿದ್ದ ಪಿಸ್ತೂಲಿನಿಂದ ಸೊಂಡರ್ಸನ ಕುತ್ತಿಗೆಗೆ ಗುಂಡುಹಾರಿಸಿದನು. ಜೊತೆಗೆ ಭಗತ್‌ಸಿಂಘನೂ ನಾಲ್ಕೈದು ಗುಂಡುಗಳನ್ನು ಹಾರಿಸಿದನು. ಸೊಂಡರ್ಸನು ಗತಪ್ರಾಣನಾಗಿ ಬಿದ್ದುಬಿಟ್ಟನು. ಭಗತ್‌ಸಿಂಘ್

ರಾಜಗುರು ಇವರಿಬ್ಬರೂ ಗೆಳೆಯನಾದ ಆಜಾದನು ಮಾಡಿದ್ದ ಪೂರ್ವಸಿದ್ಧತೆಯ ಮೇರೆಗೆ, ಕೊಲೇಜಿನ ಎತ್ತರವಾದ ಗೋಡೆಯನ್ನು ಹಾರಿ ಪಾರಾದರು.

ಮಾರನೇ ದಿನ ಕ್ರಾಂತಿಕಾರಿಗಳು ಹಂಚಿದ ಕರಪತ್ರಗಳ ಮೇಲೆಲ್ಲಾ ಸೊಂಡರ್ಸನ ವಧೆಯ ಕುರಿತಾದ ಮಾತೇ ಮಾತು. ಅವುಗಳ ಮೇಲೆ ಈ ರೀತಿ ಬರೆದಿತ್ತು:

"ಲಾಲಾ ಲಜಪತರಾಯರಂತಹ ಹಿರಿಯ ಹಾಗೂ ಜನಪ್ರೀತ ಧುರೀಣನನ್ನು ಕಳಕೊಂಡುದರಿಂದ ಭಾರತಕ್ಕೆ ಅಪಾರ ನಷ್ಟವಾಗಿದೆ. ಭಾರತೀಯರೆಲ್ಲರ ಮನಸ್ಸು ತುಂಬಾ ವ್ಯಾಕುಲಗೊಂಡಿದೆ. ಬರೇ ಒಬ್ಬ ಪೋಲಿಸನು ನಮ್ಮ ಶ್ರೇಷ್ಠ ಧುರೀಣನನ್ನು ಲಾಠಿಪ್ರಯೋಗದಿಂದ ಗಾಸಿಗೊಳಿಸಿದುದೆಂದರೆ ಇಡೀ ಭಾರತಕ್ಕೆ ಇದಕ್ಕಿಂತ ದೊಡ್ಡ ಅಗೌರವವು ಬೇರೆ ಇರಲಾರದು. ರಾಷ್ಟ್ರಕ್ಕಾದ ಈ ಅಪಮಾನವನ್ನು ಪರಿಹರಿಸುವುದೇ ತರುಣರಾದ ನಮ್ಮ ಆದ್ಯ ಕರ್ತವ್ಯವು."

ಅಜ್ಞಾತವಾಸಿಯಾಗಿ

ಈ ಘಟನೆಯು ನಡೆದ ಎರಡೇ ದಿನಗಳೊಳಗೆ ಭಗತ್ ಸಿಂಘನು ಭಗವತಿ ಚರಣ ವೋರನ ಮಡದಿ ಮತ್ತು ಮಗುವಿನೊಂದಿಗೆ ಕಲ್ಕತ್ತಕ್ಕೆ ಹೊರಟನು. ಕುಟುಂಬದ ಯಜಮಾನನಂತೆ ಛದ್ಮವೇಷ ಧರಿಸಿಕೊಂಡಿದ್ದ ಅವನೊಡನೆ ಸೇವಕನಂತೆ ವೇಷಪಲ್ಲಟಿಸಿಕೊಂಡಿದ್ದ ರಾಜಗುರುವು ಇದ್ದನು. ರೈಲು ಲಕ್ನೋವನ್ನು ಮುಟ್ಟಿದೊಡನೆ ರಾಜಗುರುವು ಕೆಳಗಿಳಿದನು. ಭಗತ್ ಸಿಂಘ್ ಮತ್ತುಳಿದವರು ಕಲ್ಕತ್ತಕ್ಕೆ ಮುಂದೊತ್ತಿದರು. ಭಗತ್ ಸಿಂಘನು ಕಲ್ಕತ್ತವನ್ನು ಮುಟ್ಟುವಾಗ ಅಲ್ಲಿ ಕೊಂಗ್ರೆಸಿನ ಸಭೆಯು ಜರಗುತಿತ್ತು.

ಸಂಘದ ಮೇಲೆ ಬ್ರಿಟಿಷರ ಸರ್ಪಗಾವಲು ಅಧಿಕವಾಗಲು, ಅವರ ಪ್ರಧಾನ ಕಚೇರಿಯನ್ನು ಲಾಹೋರಿನಿಂದ ಆಗ್ರಾಕ್ಕೆ ವರ್ಗಾಯಿಸಲಾಯ್ತು. ಅದರ ಬಳಿಯಲ್ಲೇ ಭೂಗತಚಟುವಟಿಕೆಯ ಅಂಗವಾಗಿ ಬಾಂಬು ತಯಾರಿಸುವ ಕಾರ್ಖಾನೆಯನ್ನೂ ತೆರೆಯಲಾಯ್ತು. ಶ್ರಮಜೀವಿಗಳಿಗೆ ಅಸ್ತ್ರಶಸ್ತ್ರಗಳನ್ನು ಉಪಯೋಗಿಸುವ ತರಬೇತಿಯನ್ನು ಕೊಡಲಾಯ್ತು. ಶಿವವರ್ಮ ಮತ್ತು ಸುಖದೇವರನ್ನು ಉತ್ತರ ಪ್ರದೇಶದ ಶಹರಾನಪುರಕ್ಕೂ, ಲಾಹೋರಿಗೂ ಸಂಘಚಾಲಕರನ್ನಾಗಿ ಕಳುಹಿಸಿ ಬಾಂಬು ಕಾರ್ಖಾನೆಗಳನ್ನು ತೆರೆಯಲಾಯ್ತು. ಬ್ರಿಟಿಷರು ದಬ್ಬಾಳಿಕೆ ಮತ್ತು ಚಿತ್ರಹಿಂಸೆಗಳ ಮೂಲಕ ಕ್ರಾಂತಿ

ಕಾರಿಗಳ ದೇಶಭಕ್ತಿಯ ದೀವಟಿಗೆಯನ್ನು ನಂದಿಸಲು ಶತಪ್ರಯತ್ನ ಮಾಡ ತೊಡಗಿದರು. ಬಿಳಿಯರ ಕಣ್ಣಿಗೆ ಮಣ್ಣೆರಚಿ ತಲೆಮರೆಸಿಕೊಳ್ಳುವುದರಲ್ಲಿ ಭಗತ್‌ಸಿಂಘ್ ಮತ್ತವನ ಮಿತ್ರರು ನಿಸ್ಸೀಮರಾದರೂ, ತಮ್ಮ ಸಂಘದ ಹಿತ ದೃಷ್ಟಿಯಿಂದ ಅದರ ಪ್ರಧಾನಕಚೇರಿಯನ್ನು ಆಗ್ರಾದಿಂದ ಢಿಲ್ಲಿಗೆ ವರ್ಗಾಯಿಸಿದರು.

ಶಾಸನಸಭೆಯಲ್ಲಿ ಬಾಂಬು ಸ್ಫೋಟನ; ಭಗತ್‌ಸಿಂಘನ ದಸ್ತಗಿರಿ

ಪ್ರಜಾಸತ್ತಾತ್ಮಕ ಸಮಾಜವಾದೀ ಸಂಘವು ಈಗ ತನ್ನ ಚಟುವಟಿಕೆಗಳನ್ನು ಕೇಂದ್ರ ಶಾಸನಸಭೆಯ ಕಾರ್ಯಕಲಾಪಗಳಿಗೆ ವಿರೋಧ ಬಗೆಯುವುದರಲ್ಲಿ ಕಳೆಯಿತು. ಅಂದು ಕೇಂದ್ರ ಶಾಸನಸಭೆಯು, ವ್ಯಾಪಾರ ವ್ಯವಹಾರದ ಬಿಕ್ಕಟ್ಟಿನ ವಿಷಯವನ್ನೂ, ಸಾರ್ವಜನಿಕ ಹಿತರಕ್ಷಣೆಯ ವಿಷಯವನ್ನೂ ಚರ್ಚಿಸಲೆಂದು ಒಟ್ಟು ಸೇರಿತ್ತು. ಬ್ರಿಟಿಷ್ ಸರಕಾರವು ಅಂದಿನ ಆ ಸಭೆಯ ಕಾರ್ಯಕಲಾಪಗಳಿಗೆ ಯಾವೊಂದೂ ತರದ ಪ್ರತಿಕ್ರಿಯೆಯುಂಟಾಗದಂತೆ ಕಾರ್ಮಿಕ ಮುಂದಾಳುಗಳನ್ನು ಸೆರೆಹಿಡಿದು ತುರಂಗಕ್ಕೆ ತಳ್ಳಿ ಸಕಲ ಮುಂಜಾಗ್ರತೆಯನ್ನು ವಹಿಸಿತ್ತು.

೧೯೨೯, ಎಪ್ರಿಲ್ ಆರಂದು ಕೇಂದ್ರ ಶಾಸನಸಭೆಯು ಪುನಃ ಒಟ್ಟು ಸೇರಿತು. ಒಮ್ಮೆ ತಿರಸ್ಕರಿಸಲ್ಪಟ್ಟ ಠರಾವುಗಳನ್ನು ಅಂದು ವೈಸರಾಯನು ಇನ್ನೊಂದಾವರ್ತಿ ಸಭೆಯಲ್ಲಿ ಮಂಡಿಸುವುದೆಂದು ನಿರ್ಣಯವಾಗಿತ್ತು. ಬಾಂಬು ಸ್ಫೋಟನದ ಪೂರ್ವಸಿದ್ಧತೆಯನ್ನು ಮಾಡಿಕೊಂಡು ಸಮಯವನ್ನು ನಿರೀಕ್ಷಿಸಿಕೊಂಡಿದ್ದ ಭಗತ್ ಸಿಂಘ್ ಮತ್ತು ಭಟುಕೇಶ್ವರ ದತ್ತರು ಸಭಾಗೃಹದ ಪ್ರೇಕ್ಷಕವೃಂದದವರೊಡನೆ ಸೇರಿಕೊಂಡರು. ವೈಸರಾಯನ ಗೃಹಖಾತೆಯ ಸದಸ್ಯನಾಗಿದ್ದ ಸರ್ ಜೋರ್ಜ್ ಶೂಸ್ಟರನು ಠರಾವುಗಳನ್ನು ಮಂಡಿಸಲು ಸಭೆಗೆ ಬಂದಿದ್ದನು. ಎಡಬಲಪಕ್ಕಗಳಲ್ಲಿ ವಿಠಲಭಾಯಿ ಪಟೇಲ್ ಮತ್ತು ಪಂಡಿತ ಮೋತಿಲಾಲ್ ನೆಹ್ರೂರವರು ಆಸೀನರಾಗಿದ್ದರು. ಶೂಸ್ಟರನು ಠರಾವುಗಳನ್ನು ಓದತೊಡಗಿದೊಡನೆ ಭಗತ್ ಸಿಂಘನು ತನ್ನ ಸ್ಥಾನದಿಂದೆದ್ದು ಬಾಂಬುವೊಂದನ್ನು ಅವನಿಗೆ ಗುರಿಯಿಟ್ಟು ಎಸೆದನು. ಬಾಂಬು ಸ್ಫೋಟನವಾದೊಡನೆ ಸಭಾಗೃಹದಲ್ಲೆಲ್ಲಾ ಗಲಿಬಿಲಿಯುಂಟಾಯಿ

ತೆನ್ನವಷ್ಟರಲ್ಲಿ ಮಗುದೊಂದನ್ನು ಭಟುಕೇಶ್ವರ ದತ್ತನು ಎಸೆಯಲು, ಸಭಾಸದನವೆಲ್ಲವೂ ಹೊಗೆಯಿಂದ ತುಂಬಿಹೋಯಿತು. "ಕ್ರಾಂತಿಯು ಚಿರ ಕಾಲ ಬಾಳಲಿ" ಎಂಬ ಘೋಷಣೆಯು ಸಭಾಗೃಹದ ನಾಲ್ದೆಸೆಗಳಲ್ಲಿಯೂ ಮೊಳಗಿ ಮಾರ್ದನಿಗೊಂಡಿತು. ಭಗತ್ ಸಿಂಘ್ ಮತ್ತು ಭಟುಕೇಶ್ವರ ದತ್ತರು ಕ್ರಾಂತಿಕಾರ್ಯಕ್ರಮಗಳ ಕರಪತ್ರಗಳನ್ನು ಹಂಚಿದರು. ಪಲಾಯನ ಮಾಡಲು ಸಾಕಷ್ಟು ಸಂದರ್ಭಗಳಿದ್ದರೂ ಭಗತ್ ಸಿಂಘ್ ಮತ್ತು ಭಟುಕೇಶ್ವರ ದತ್ತರಿಗೆ ತಮ್ಮ ನ್ಯಾಯನಿಷ್ಠೆಯ ಅರಿವನ್ನು ಜನರ ಗುಂಟುಮಾಡಬೇಕೆಂಬ ಮನಸ್ಸಿದ್ದುದರಿಂದ ಅವರು ನಿಂತಲ್ಲಿಂದ ಕದಲಲಿಲ್ಲ ಕಾಲ್ತೆಗೆಯಲಿಲ್ಲ. ಸಾರ್ಜಂಟ್ ಟೆರ್ರಿಯು ಅವರಿಬ್ಬರ ಕೈಗಳಿಗೆ ಕೋಳಗಳನ್ನು ಬಿಗಿದು ನೇರವಾಗಿ ಸೆರೆಮನೆಗೆ ಕೊಂಡೊಯ್ದನು.

ಭಗತ್ ಸಿಂಘನ ಧೋರಣೆ—ಅವನ ಬೆಂಬಲಿಗರ ಬಂಧನ

ಭಗತ್ ಸಿಂಘ್ ಮತ್ತವನ ಮಿತ್ರವರ್ಗವನ್ನು ಹಲವರು ಬ್ರಿಟಿಷರ ರಕ್ತಕ್ಕಾಗಿ ಹಾತೊರೆಯುತ್ತಿದ್ದ ನರಪಿಶಾಚಿಗಳೆಂದು ಜರಿದುದುಂಟು. ಲಾಹೋರಿನಲ್ಲಿ ಸೋಂಡರ್ಸನ ವಧೆಯಾದಾಗಲೂ ಶಾಸನಸಭೆಯಲ್ಲಿ ಬಾಂಬು ಸ್ಫೋಟನವಾದಾಗಲೂ ಜನರು ಇದೇ ರೀತಿಯ ಅಭಿಪ್ರಾಯಪಟ್ಟರು. ಇವೆಲ್ಲಾ ಅಭಿಪ್ರಾಯಗಳನ್ನು ಪರಕೀಯರಾದ ಬ್ರಿಟಿಷರು ತಮ್ಮ ಚೇಲರ ಮೂಲಕ ಜನರಲ್ಲಿ ಬಿತ್ತಿದರು. ಭಗತ್ ಸಿಂಘ್ ಮತ್ತುಳಿದ ಕ್ರಾಂತಿಕಾರಿ ಕಾರ್ಯಕರ್ತರು ಅವರ ಸಾಮ್ರಾಜ್ಯಲಾಲಸೆಯ ಪಥದಲ್ಲಿ ಪ್ರಬಲವಾದ ಕಂಟಕವಾಗಿ ಪರಿಣಮಿಸಿದುದೇ ಬ್ರಿಟಿಷರ ಪ್ರತಿಕ್ರಿಯೆಗೆ ಬಲವತ್ತರವಾದ ಕಾರಣವಾಗಿತ್ತು. ಮೊಂಟೆಗ್ಯು ಚೆಮ್ಸ್‌ಫೊರ್ಡ್ ಸುಧಾರಣೆಗಳೂ, ಸೈಮನ್ ಕಮಿಶನಿನ ಧೋರಣೆಗಳೂ ಕೇವಲ ಜನವಂಚಕ ಮಾರ್ಗಗಳಾಗಿದ್ದುವೆಂಬುದನ್ನು ಭಾರತದ ಪ್ರಜೆಗಳಿಗೆ ಮಂದಟ್ಟುಮಾಡುವುದೇ ಕ್ರಾಂತಿಕಾರಿಗಳಾದ ಭಗತ್ ಸಿಂಘ್ ಮತ್ತವನ ಸಹಕಾರ್ಯಕರ್ತರ ಆಕಾಂಕ್ಷೆಯಾಗಿತ್ತು. ಭಾರತದ ಸ್ವಾತಂತ್ರ್ಯವೆಂಬುದು ಕೇವಲ ಶ್ರೀಮಂತ ಭಂಡವಾಳಶಾಹಿಗಳಾಗಿರದೆ ಶೋಷಕವರ್ಗದವರೂ ಅದರಲ್ಲಿ ಸಮಭಾಗಿಗಳಾಗಲು ಅರ್ಹರೆಂಬುದೇ ಅವರ ಹುರುಳಿನ ತಿರುಳಾಗಿತ್ತು. ರಾಜಕೀಯ

ಸ್ವಾತಂತ್ರ್ಯದೊಡನೆ ಶೇಕಡಾ ೯೮ ಜನರ ಆರ್ಥಿಕ ಸ್ವಾತಂತ್ರ್ಯವೇ ಅವರ ಮೂಲಮಂತ್ರವಾಗಿತ್ತು.

ಭಗತ್ ಸಿಂಘನ ದಸ್ತಗಿರಿಯಾದ ಕೆಲವೇ ದಿನಗಳಲ್ಲಿ ಪೋಲಿಸರು ಇನ್ನುಳಿದ ಕ್ರಾಂತಿಕಾರಿಗಳನ್ನು ಸುತ್ತುಗಟ್ಟಿ ಸೆರೆಹಿಡಿದರು. ಎಪ್ರಿಲ್ ೧೫, ೧೯೨೯ರಲ್ಲಿ ಸುಖದೇವ, ಜೈಗೋಪಾಲ ಮತ್ತು ಕಿಶೋರಿಲಾಲರನ್ನು ಸೆರೆಹಿಡಿಯಲಾಯ್ತು. ಎರಡು ತಿಂಗಳುಗಳೊಳಗೆ ಬ್ರಿಟಿಷ್ ಪೋಲಿಸರು ಹೆಚ್ಚುಕಡಿಮೆ ೧೬ ಜನ ಕ್ರಾಂತಿಕಾರಿಗಳನ್ನು ಬಂಧಿಸಿ ಸೆರೆಮನೆಗೆ ತಳ್ಳಿದರು!

ಕ್ರಾಂತಿಕಾರಿಗಳ ಆಮರಣ ಉಪವಾಸ; ಜತಿನ್‌ದಾಸನ ಮರಣ

ಮೃಗರಾಜನಾದ ಕೇಸರಿಯನ್ನು ಬಲೆಯಲ್ಲಿ ಬಂಧಿಸಿದರೂ ಅವನು ತನ್ನ ಶೌರ್ಯವನ್ನು ಬಿಡಲೊಲ್ಲನು. ಭಗತ್ ಸಿಂಘ್ ಮತ್ತವನ ಪಕ್ಷದವರು ಶೌರ್ಯದಲ್ಲಿ ಮೃಗರಾಜನಿಗೆ ಸರಿಸಮಾನರು. ಅಂದಮೇಲೆ ಬ್ರಿಟಿಷ್ ಸರಕಾರವು ಅವರನ್ನು ಸೆರೆಮನೆಗೆ ತಳ್ಳಿದರೂ, ಅವರ ಪರಾಕ್ರಮವು ಕುಂದಲೊಲ್ಲದು. ಒಂದೂವರೆ ವರ್ಷದ ಸೆರೆಮನೆ ವಾಸವು ಅವರನ್ನು ಕುಂದಣವನ್ನಾಗಿ ಪರಿವರ್ತಿಸಿತೇ ವಿನಾ ಕಾಗೆ ಬಂಗಾರವನ್ನಾಗಿ ಬದಲಾಯಿಸಲಿಲ್ಲ. ತಮ್ಮ ಶಕ್ತಿಸಾಮರ್ಥ್ಯ ಚಿರಂತನ ಚೇತನಾದಿಗಳಿಂದ, ಭಗತ್ ಸಿಂಘ್ ಮತ್ತುಳಿದ ಕ್ರಾಂತಿಕಾರಿಗಳು ಕಾರಸ್ಥಾನದಲ್ಲಿದ್ದರೂ ಭಾರತದ ಜನರ ಹೃತ್ಕಮಲಗಳಲ್ಲಿ ಅಗೋಚರವಾಗಿ ನೆಲೆಸಿದ್ದರು ಎನ್ನಬಹುದು. ಅವರು ಕಾರಾಗೃಹದಲ್ಲಿ ಒಡೆಯರಾಗಿಯೇ ಜೀವಿಸಿದರು ಹೊರತು ಗುಲಾಮರಾಗಿ ಕಾಲಕಳೆಯಲಿಲ್ಲ.

ಜೂನ್ ೧೫ರಂದು ಲಾಹೋರ್ ಕೇಂದ್ರ ಜೈಲಿನಲ್ಲಿ ಭಗತ್ ಸಿಂಘ್ ಮತ್ತು ಭಟುಕೇಶ್ವರ ದತ್ತರು ತಮ್ಮ ಆಮರಣ ಉಪವಾಸವನ್ನು ಪ್ರಾರಂಭಿಸಿದರು. 'ಶಾಸನಸಭೆಯ ಬಾಂಬು ಪ್ರಕರಣ'ದಲ್ಲಿ ಅವರಿಗೆ ಕರಿನೀರಿನ ಶಿಕ್ಷೆಯನ್ನು ವಿಧಿಸಿದುದೇ ಅವರ ಅನ್ನಸತ್ಯಾಗ್ರಹಕ್ಕೆ ಪ್ರಾಮುಖ್ಯ ಹೇತುವಾಗಿತ್ತು. ಜುಲೈ ೧೦, ೧೯೨೯ರಲ್ಲಿ ಭಗತ್ ಸಿಂಘನ ಬಣದವರಾದ ಜತಿನ್‌ದಾಸ್, ಅಜಯ ಘೋಷ್, ಶಿವವರ್ಮ, ಗಯಾ ಪ್ರಸಾದ್, ಜೈದೇವ ಕಪೂರ್ ಮೊದಲಾದವರನ್ನು ಸರಕಾರವು ದಸ್ತಗಿರಿ ಮಾಡಿ

ಲಾಹೋರ್ ಜೈಲಿಗೆನೇ ಕಳುಹಿಸಿತು. ಕ್ರಾಂತಿಕಾರಿಗಳು ಅನ್ನವನ್ನು ನಿರಾಕರಿಸಿ ಆಮರಣ ಉಪವಾಸ ಕೈಕೊಂಡುದನ್ನು ಕಂಡು ಜೇಲಿನ ಅಧಿಕಾರಿಗಳು ಬಲಾತ್ಕಾರದಿಂದ ಅವರಿಗುಣ್ಣಿಸಲು ಮೊದಲುಮಾಡಿದರು. ಅನ್ನಸತ್ಯಾಗ್ರಹವನ್ನು ಪ್ರಾರಂಭಿಸಿದ ಎರಡು ವಾರಗಳಲ್ಲಿ ಜತೀಂದ್ರನಾಥ ಸನ್ಯಾಲ, ಅಜಯ ಘೋಷ್ ಮತ್ತು ಜತಿನ್‌ದಾಸರ ಪರಿಸ್ಥಿತಿಯು ಚಿಂತಾಜನಕವಾಯ್ತು. ಇದನ್ನು ಕಂಡ ಅಧಿಕಾರಿಗಳು ಚಿತ್ರಹಿಂಸೆಯ ಮೂಲಕ ಕ್ರಾಂತಿವೀರರಿಗೆ ಉಣ್ಣಿಸಲು ಪ್ರಾರಂಭಿಸಿದರು. ಮೂಗಿಗೆ ರಬ್ಬರ್ ನಳಿಗೆಯನ್ನು ಸಿಕ್ಕಿಸಿ ಪ್ರಯತ್ನಪೂರ್ವಕವಾಗಿ ಆಹಾರವನ್ನು ಬಾಯಿಗೆ ತಳ್ಳಲಾಯ್ತು. ಆದರೆ, ತಮ್ಮ ಇಚ್ಛೆಗೆ ವಿರುದ್ಧವಾಗಿ ಇತ್ತ ಈ ಆಹಾರವನ್ನು ಎಂದೆಂದಿಗೂ ಸಹಿಸೆವೆಂದು ಪಣತೊಟ್ಟರು. ಕಿಶೋರಿಲಾಲನು ಅಧಿಕಾರಿಗಳಿತ್ತ ಆಹಾರವನ್ನು ಕಾರಲಿಕ್ಕೋಸ್ಕರ ಕರಿಮೆಣಸು ನುಂಗಿ ಬಿಸಿನೀರು ಕುಡಿಯತೊಡಗಿದನು. ಅಜಯಘೋಷನು ನೊಣಗಳನ್ನು ಕಬಳಿಸತೊಡಗಿದನು.

ಸಪ್ಟೆಂಬರ ೨ಕ್ಕೆ ಭಗತ್ ಸಿಂಘ್ ಮತ್ತು ಭಟುಕೇಶ್ವರ ದತ್ತರು ತಮ್ಮ೮೧ ದಿನಗಳ ಉಪವಾಸವನ್ನೂ ಇನ್ನುಳಿದ ಕ್ರಾಂತಿಕಾರಿಗಳು ತಮ್ಮ ೫೧ ದಿನಗಳ ಉಪವಾಸವನ್ನೂ ಮುಗಿಸಿದರು. ಜತಿನ್ ದಾಸನ ಪರಿಸ್ಥಿತಿಯು ಅವನು ಕೈಕೊಂಡಿದ್ದ ಅನ್ನಸತ್ಯಾಗ್ರಹದಿಂದ ಭೀಕರತೆಗೆ ಮುಟ್ಟಿತ್ತು. ಅವನು ಬದುಕುವ ಆಸೆಗಳೆಲ್ಲಾ ಮಣ್ಣುಗೂಡಿದ್ದವು. ಸರಕಾರವು ಜತಿನ್ ದಾಸನನ್ನು ಬಿಡುಗಡೆಮಾಡಲು ಭಾವಿಸುತಿದ್ದರೂ ಕ್ರಾಂತಿಕಾರಿಗಳ ಚಟುವಟಿಕೆಗಳಿಗೆ ಹೆದರಿ ವಿಮೋಚನೆಯನ್ನು ತಡೆಯುತಿತ್ತು. ಸಪ್ಟೆಂಬರ ನಾಲ್ಕರಂದು ಜತಿನನ ಪರಿಸ್ಥಿತಿಯು ತೀರಾ ಚಿಂತಾಜನಕವಾಗಿ ಅವನು ಸಾಯುವುದು ನಿಸ್ಸಂದೇಹವೆಂದಾಯ್ತು. ಸರಕಾರದ ಈ ಧೋರಣೆಯನ್ನು ಪ್ರತಿಭಟಿಸಿ ಭಗತ್ ಸಿಂಘ ಮತ್ತು ಭಟುಕೇಶ್ವರ ದತ್ತರು ತಮ್ಮ ಉಪವಾಸವನ್ನು ಪುನಃ ಮುಂದುವರಿಸಿದರು. ಸಪ್ಟೆಂಬರ ೫ರ ಸುಪ್ರಭಾತ ಕಾಲದಲ್ಲಿ ಜತಿನನ ಅಂತ್ಯಕಾಲವು ಸನ್ನಿಹಿತವಾಗುತ್ತಲಿದೆ. ಕಾರಾಗೃಹದ ಎತ್ತರವಾದ ಗೋಡೆಗಳ ಹೊರಗೆ ಸಾವಿರಾರು ಜನರು ನೆರೆದು ಜತಿನನ ಅನಾರೋಗ್ಯದ ವಾರ್ತೆಯನ್ನು ವಿಷಣ್ಣವದನದಿಂದ ಕೇಳುತಿದ್ದಾರೆ. ಇನ್ನೇನು ಕೇವಲ ೫ ನಿಮಿಷಗಳ ಅವಕಾಶ! ಅಷ್ಟರಲ್ಲಿ ಕುತೂಹಲದಿಂದ

ನಿರೀಕ್ಷಿಸುತಿದ್ದ ಜನರಿಗೆ ಜತಿನನು ತೀರಿದನೆಂಬ ಅಮಂಗಲ ವಾರ್ತೆಯು ಕೇಳಬರುತ್ತಿದೆ. ಜನರಲ್ಲಿ ಹಾಹಾಕಾರವೇಳುತ್ತದೆ. ಭಾರತದ ಪುರುಷ ಸಿಂಹವೊಂದು ಬೇಡನ ಬಲೆಯಲ್ಲಿ ಬಿದ್ದು ನರಳಿ ಹೊರಳಿ ಪ್ರಾಣ ನೀಗುತ್ತದೆ. ತನ್ನ ಅಮೂಲ್ಯ ರತ್ನವೊಂದನ್ನು ಕಳಕೊಂಡ ಭಾರತ ದೇಶವು ಬಡವಾಗುತ್ತದೆ.

ದೇಶವೀರ ಜತಿನ್ ದಾಸನು ಮರಣಹೊಂದುವ ಸಮಯಕ್ಕೆ ಅಂದಿಗೆ ಅವನ ೬೩ ದಿನಗಳ ಉಪವಾಸವು ಮುಗಿದಿತ್ತು. ಜತಿನ್ ದಾಸನ ಶವವನ್ನು ಜೇಲಿನಿಂದ ಹೊರತಂದು ಕಲ್ಕತ್ತಕ್ಕೆ ಸಾಗಿಸುವಾಗ ಲಾಹೋರ್ ನಗರದಲ್ಲಿನ ಲಕ್ಷೋಪಲಕ್ಷ ಜನರು ತಮ್ಮ ಅಂತಿಮ ಶ್ರದ್ಧಾಂಜಲಿಯನ್ನು ಆ ಹುತಾತ್ಮನಿಗೆ ಸಮರ್ಪಿಸಿದರು. ಜತಿನ್ ದಾಸನು ನಿಧನಹೊಂದಿದರೂ ಅವನು ಹೂಡಿದ ಅನ್ನಸತ್ಯಾಗ್ರಹದ ಚಳವಳದಿಂದ ರಾಜಕೀಯ ಕೈದಿಗಳನ್ನು ಜೈಲಿನಲ್ಲಿ ಉತ್ತಮ ರೀತಿಯಿಂದ ಕಾಣುವಂತಾಯಿತು.

"ಆತ್ಮಾರ್ಥೇ ಪೃಥಿವಿಂ ತ್ಯಜೇತ್"

ಆರು ತಿಂಗಳುಗಳವರೆಗೆ ಎಡೆಬಿಡದೆ ಜರಗಿದ ವಿದೇಶಿಯರ ವಿಚಾರಣಾ ಸಮಿತಿಯು ಅಕ್ಟೋಬರ ೭, ೧೯೩೦ರಂದು ಭಗತ್ ಸಿಂಘ್, ಸುಖದೇವ ಮತ್ತು ರಾಜಗುರು ಈ ಮೂವರು ಕ್ರಾಂತಿಕಾರಿಗಳನ್ನು ಫಾಶಿ ಶಿಕ್ಷೆಗೆ ಗುರಿಮಾಡಿತು. ಬ್ರಿಟಿಷರ ಈ ಅಕ್ಷಮ್ಯ ಅಪರಾಧದಿಂದಾಗಿ ಮೊದಲೊಮ್ಮೆ ಜತಿನ್ ದಾಸನ ಅಕಾಲಮರಣದಿಂದ ಮನನೊಂದಿದ್ದ ಭಾರತವು ಪುನಃ ಶೋಕಸಾಗರದಲ್ಲಿ ಮುಳುಗಿತು.

ಭಗತ್ ಸಿಂಘ್ ಮತ್ತವನ ಪಕ್ಷದವರು ಇದರಿಂದ ಯಾವ ರೀತಿಯಲ್ಲೂ ಎದೆಗುಂದಲಿಲ್ಲ. ತಮ್ಮ ಮರಣವು ಖಂಡಿತವೆಂಬುದು ಅವರಿಗೆ ಮೊದಲೇ ತಿಳಿದಿತ್ತು. ದೇಶದ ಗೌರವವನ್ನು ಕಾಪಾಡುವುದಕ್ಕಾಗಿ ತಮ್ಮ ದೇಹಗಳನ್ನು ಈಯುವುದಕ್ಕಿಂತ ಶ್ರೇಷ್ಠವಾದ ಕಾಣಿಕೆ ಇನ್ನೊಂದಿರಲಾರದೆಂದು ಅವರು ಬಗೆದಿದ್ದರು. ಭಾರತದ ಭಾವಿ ಸುಖಸಂತೋಷಗಳಿಗಾಗಿ ತಮ್ಮ ರಕ್ತವನ್ನು ಧಾರೆಯೆರೆಯಲು ಸ್ವತಃಸಿದ್ಧರಾದ ಅವರು ತಮಗೊದಗಿದ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಬಗೆಯಲಿಲ್ಲ. ಇತರರು ತಮ್ಮ ಪರವಾಗಿ ವಾದಿಸುವುದನ್ನೂ ಅವರು ಒಪ್ಪಲಿಲ್ಲ. ಈ ತರದ ವರ್ತನೆಯು

ಅವರ ಧ್ಯೇಯಧೋರಣೆಗಳಿಗೆ ವಿರೋಧವಾಗಿತ್ತು. ಭಗತ್ ಸಿಂಘನ ಪಿತನಾದ ಸರ್ದಾರ್ ಕಿಶನ್ ಸಿಂಘನೇ ಕೋರ್ಟನ್ನು ಹತ್ತಿ ತನ್ನ ಮಗನನ್ನು ಶಿಕ್ಷೆಯಿಂದ ಬಿಡಿಸಲು ಹವಣಿಸಿದರೂ ಅವನು ಅದಕ್ಕೆ ಕಿವಿಗೊಡದಾದನು. ಈ ಸಂದರ್ಭದಲ್ಲಿ ಭಗತ್ ಸಿಂಘನು ತನ್ನ ತಂದೆಗೆ ಬರೆದ ಪತ್ರವನ್ನು ಕಂಡಲ್ಲಿ ಅವನು ರಾಜಕೀಯ ಅಭಿಪ್ರಾಯಗಳಲ್ಲಿ ತಂದೆಗಿಂತ ಯಾವ ರೀತಿಯಲ್ಲಿ ಭಿನ್ನನಿದ್ದನೆಂದು ತಿಳಿದುಬರುವುದು.

"ತೀರ್ಥರೂಪರಿಗೆ,

"ತಾವು ನನ್ನ ಬಂಧವಿಮೋಚನೆಗಾಗಿ ನ್ಯಾಯಾಲಯಕ್ಕೆ ಒಪ್ಪಿಸಿದ ಬಿನ್ನಹವನ್ನು ಕಂಡು ತೀರಾ ಸೋಜಿಗಗೊಂಡೆ. ತಾವು ನನ್ನ ತೀರ್ಥರೂಪರಾದರೂ, ಈ ವಿಷಮಪರಿಸ್ಥಿತಿಯಲ್ಲಿ ಇಂತಹ ಕೆಲಸವನ್ನು ಮಾಡಲು ಎದೆತಾಳಿದುದನ್ನು ಕಂಡು ನನಗೆ ತುಂಬಾ ಮನಸ್ತಾಪವಾಗುತ್ತದೆ. ನಾನು ರಾಜಕೀಯದಲ್ಲಿ ತಮಗಿಂತ ತೀರಾ ಭಿನ್ನನಾಗಿದ್ದೆನೆಂದು ತಿಳಿದೂ ತಾವು ಈ ಕೆಲಸಕ್ಕೆ ಕೈಹಚ್ಚಿದುದು ತಮ್ಮ ತಿಳಿಗೇಡಿತನವನ್ನು ಪ್ರದರ್ಶಿಸುತ್ತದೆ.

"ನಾನು ಈ ವಿಚಾರಣೆಯ ವಿಷಯದಲ್ಲಿ ಒಂದು ನಿರ್ದಿಷ್ಟವಾದ ಧ್ಯೇಯವನ್ನು ಇಟ್ಟುಕೊಂಡು ಅದಕ್ಕೋಸ್ಕರ ಹೆಣಗಾಡುತಿದ್ದೇನೆ. ಈ ನನ್ನ ಧ್ಯೇಯಧೋರಣೆಗಳಿಗೆ ವಿರೋಧವಾಗಿ ನಡೆಯುವ ಯಾವ ಕಾರ್ಯಕ್ರಮಗಳನ್ನೂ ನಾನು ಸಹಿಸೆನು. ಅದು ನನ್ನ ಅಸ್ತಿತ್ವಕ್ಕೆನೇ ಹೊರತಾದುದು. ನಾನೂ ನನ್ನ ಮಿತ್ರರೂ ಈ ಉಚ್ಚತಮಧ್ಯೇಯಗಳಿಗೋಸ್ಕರ ಹೋರಾಡುತ್ತಿದ್ದೇವೆ. ಅದರಲ್ಲಿನ ಸೋಲುಗೆಲುಗಳ ಕಡೆಗೆ ನಮ್ಮ ಗಮನವಿಲ್ಲ. ಕರ್ತವ್ಯದಕ್ಷತೆಯೇ ನಮ್ಮ ಜೀವನದ ಗುರಿಯು. ಜನರು ನಮ್ಮ ಕಾರ್ಯಕ್ರಮಗಳನ್ನು ಮೆಚ್ಚದಿರಬಹುದು, ಅವರಲ್ಲಿ ನೀವೂ ಒಬ್ಬರಾಗಿದ್ದೀರಿ ಎಂಬುದು ನನಗೆ ಗೊತ್ತು. ನನ್ನ ಈ ನಶ್ವರವಾದ ದೇಹವನ್ನು ಕಾಪಾಡಿಕೊಳ್ಳಲು ಧ್ಯೇಯಧೋರಣೆಗಗಳನ್ನು ಬಲಿಕೊಟ್ಟು ವ್ಯಕ್ತಿತ್ವವಿಹೀನನಾಗಿ ನಾನು ಬಾಳಲಾರೆನು.

"ಪೂಜ್ಯಪಿತರೇ, ತುಂಬಾ ವ್ಯಾಕುಲಗೊಂಡಿರುವ ನನ್ನ ಮನಸ್ಸು ಈ ಉಗ್ರವಾದ ಮಾತುಗಳನ್ನಾಡುವಂತೆ ಮಾಡಿತು. ಅದಕ್ಕಾಗಿ ತಾವು ಬೇಸರಿಸಬಾರದು. ತಂದೆಯೇ, ಈ ನಿಮ್ಮ ಕಾರ್ಯವು ದೇಶದ್ರೋಹವಾಗಿದ್ದರೂ ನೀವು ನನ್ನನ್ನು ಹೆತ್ತ ತಂದೆಯೆಂದು ಸುಮ್ಮನಿದ್ದೇನೆ. ಆದರೆ ನಿಮ್ಮ ಈ ಪ್ರಯತ್ನವು ಕೇವಲ ಅಂಜುಬುರುಕುತನದ ದಾರಿಯೆಂದು ಖಂಡಿತವಾಗಿ ಹೇಳಬಲ್ಲೆ. ನೀವು ಭಾರತದ ಸ್ವಾತಂತ್ರ್ಯಕ್ಕಾಗಿ ತುಂಬಾ ಪರಿಶ್ರಮಿಸಿದವರೆಂಬುದನ್ನು ನಾನು ಚೆನ್ನಾಗಿ ಮನವರಿತಿದ್ದೇನೆ. ಆದರೆ ತಾವು ಈ ಸಂದರ್ಭದಲ್ಲಿ ಇಂತಹ ಹೇಡಿತನವನ್ನು ಏಕೆ ಪ್ರದರ್ಶಿಸಿದಿರೆಂಬುದು ತುಂಬಾ ವಿಸ್ಮಯಕರವಾದ ಸಂಗತಿ.

"ನಾನು ಮತ್ತು ನನ್ನ ಗೆಳೆಯರು ನಿಮ್ಮ ಆಲೋಚನೆಯನ್ನು ಮೆಚ್ಚ ಲಾರೆವು. ನಮ್ಮ ಕುರಿತಾಗಿ ಯಾರೂ ಕೋರ್ಟಿನಲ್ಲಿ ವಾದಿಸುವ ಅವಶ್ಯಕತೆ ಇರ ಲಾರದು. ನನ್ನ ಮೇಲೆ ಹೊರಿಸಿರುವ ಅಪರಾಧವು ತೀರಾ ಮಿಥ್ಯವಾಗಿದೆಯೆಂಬು ದನ್ನು ಭಾರತದ ಸರ್ವ ಪ್ರಜೆಗಳು ಒಪ್ಪುವಂತೆ ಈ ನ್ಯಾಯಾಲಯವೇ ಅವರಿಗೆ ಮುಂದಟ್ಟುಮಾಡಲಿ."

ಸೋಂಡರ್ಸ್‌ನ ವಧೆ (ಲಾಹೋರ್ ಖೂನಿಯ ಪ್ರಕರಣ) ಯಿಂದಾಗಿ ದಸ್ತಗಿರಿ ಮಾಡಲ್ಪಟ್ಟ ಶಿವವರ್ಮ, ಕಿಶೋರಿಲಾಲ್, ಗಯಾಪ್ರಸಾದ, ಜೈದೇವ ಕಪೂರ, ವಿಜಯ ಕುಮಾರ ಸಿನ್ಹಾ, ಮಹಾವೀರ ಸಿಂಘ್, ಕಮಲ ನಾಥ ತಿವಾರಿಯವರನ್ನು ಕರಿನೀರಿನ ಶಿಕ್ಷೆಗೆ ಗುರಿಪಡಿಸಲಾಯ್ತು. ಕುಂದನ್ ಲಾಲ್ ಮತ್ತು ಪ್ರೇಮದತ್ತರಿಗೆ ಏಳು ವರ್ಷಗಳ ಸಜೆಯನ್ನು ವಿಧಿಸಿದರು. ಅಜಯ ಘೋಷ್, ಸನ್ಯಾಲ್ ಮತ್ತು ದೇಸ್‌ರಾಜರನ್ನು ಅಪ್ರಬುದ್ಧರೆಂದು ಬಿಡುಗಡೆಮಾಡಲಾಯ್ತು. ಅವರು ಕಾಯಿಲೆಯಿಂದ ನರಳುತ್ತಿರುವುದು ಅವರ ಬಂಧವಿಮೋಚನೆಗೆ ಇನ್ನೊಂದು ಕಾರಣವಾಗಿತ್ತು. ಭಟುಕೇಶ್ವರ ದತ್ತನನ್ನು ಮೊದಲೇ ಬಿಟ್ಟುಬಿಟ್ಟಿದ್ದರು. ಚಂದ್ರಶೇಖರ, ಅಜಾದ್, ಕೈಲಾಸಪತಿ, ಭಗವತಿ ಚರಣ ವೋರ, ಯಶಪಾಲ, ಸದ್ಗುರು, ದಯಾಳ್ ಮೊದಲಾದವರು ಈ ಮೊದಲೇ ತಲೆಮರೆಸಿಕೊಂಡಿದ್ದರು.

ಭಗತ್ ಸಿಂಘನ ಬಲಿದಾನ

ಭಗತ್ ಸಿಂಘ್, ಸುಖದೇವ, ರಾಜಗುರು ಈ ಮೂವರನ್ನು ಸರ ಕಾರವು ಫಾಶಿಶಿಕ್ಷೆಗೆ ಗುರಿಪಡಿಸಿದುದಕ್ಕೆ ಪ್ರತಿಭಟನೆಯಾಗಿ ಅಖಿಲ ಭಾರತ ದಲ್ಲೆಲ್ಲಾ ಚಳವಳವೆದ್ದಿತು. ಭಗತ್ ಸಿಂಘನು ಇಷ್ಟರಲ್ಲೇ ದೇಶದ ತರು ಣರ ಆರಾಧ್ಯದೇವತೆಯಾಗಿ ಪರಿಣಮಿಸಿದ್ದನು. ಅವನ ಗುಡುಗಿನಂಥಾ ವಾಣಿಯನ್ನು ಕೇಳಿ ದೇಶಕ್ಕೆ ದೇಶವೇ ಅಣಿನೆರೆಯುತಿತ್ತು. ತರುಣರು ತಮ್ಮ ಪ್ರಾಣಗಳನ್ನೇ ಅವನಿಗೆ ಮುಡಿಪಾಗಿಡುತಿದ್ದರು. ಅವನ ನಾಮ ವನ್ನು ಕೇಳಿದೊಡನೆ ಅವರಿಗೆ ರಣವೀಳ್ಯ ಕೊಟ್ಟಂತಾಗುತಿತ್ತು. ನವಚೇತ ನದ ಹೊನಲು ಅವರ ನರನಾಡಿಗಳಲ್ಲಿ ಉಕ್ಕಿಹರಿಯುತಿತ್ತು.

ಕೊಂಗ್ರೆಸ್ಸನ್ನು ಅಹಿಂಸೆಯ ಪಥದಲ್ಲಿ ನಡೆಸುತಿದ್ದ ಗಾಂಧಿಜಿಯವರಿಗೆ ಭಗತ್ ಸಿಂಘನ ಧೋರಣೆಯು ಒಪ್ಪುತ್ತಿರಲಿಲ್ಲ. ಅವರು ಅವನ ಗಂಡು ತನ, ಬಹುಮುಖ ಚಟುವಟಿಕೆ, ಚಿರಂತನ ಸ್ಫೂರ್ತಿ ಮುಂತಾದುವುಗಳನ್ನು

ತುಂಬಾ ಮೆಚ್ಚುತಿದ್ದರೂ ಹಿಂಸಾಕಾರ್ಯಕ್ರಮಗಳನ್ನು ತಿರಸ್ಕರಿಸುತಿದ್ದರು. ದಶಂಬರ ೨೩, ೧೯೨೯ರಲ್ಲಿ ವೈಸರಾಯ ಇರ್ವಿನ್ ಮತ್ತು ಗಾಂಧಿಜಿಯವರ ಒಪ್ಪಂದವು ಲಾಹೋರಿನಲ್ಲಿ ಜರಗುವುದೆಂದು ನಿಶ್ಚಯವಾಗಿತ್ತು. ವೈಸರಾಯನು ಸಾಲಂಕೃತಭೂಷಿತನಾಗಿ ಲಾಹೋರಿಗೆ ಪ್ರಯಾಣ ಬೆಳೆಸುತ್ತಿದ್ದಾಗ ದಾರಿಯಲ್ಲಿ ಕ್ರಾಂತಿಕಾರಿ ಪಕ್ಷದವನಾದ ಯಶಪಾಲನು ಬಾಂಬುವೊಂದರ ಸ್ಫೋಟನಮಾಡಿದ್ದನು. ಆದರೆ ದುರ್ದೈವಕ್ಕೆ ವೈಸರಾಯನ ಊಟದ ಗಾಡಿಯು ಭಸ್ಮವಾಯಿತೇ ಹೊರತು ಅವನಿಗೆ ಯಾವ ರೀತಿಯ ಅಪಾಯವೂ ಸಂಭವಿಸಲಿಲ್ಲ. ಗಾಂಧಿಜಿಯವರು ಈ ಕುರಿತಾಗಿ ತನ್ನ 'ಯಂಗ್ ಇಂಡಿಯ'ದಲ್ಲಿ ಅಗ್ರಲೇಖನವೊಂದನ್ನು ಬರೆದು ಕ್ರಾಂತಿಕಾರಿಗಳ ವಿನಾಶಕಾರಿ ಚಟುವಟಿಕೆಗಳನ್ನು ತೀವ್ರವಾಗಿ ಖಂಡಿಸಿದರು.

ಮಾರ್ಚ್ ೨೩, ೧೯೩೧ ಭಾರತದ ಇತಿಹಾಸದಲ್ಲೇ ಶೋಕಭರಿತವಾದ ದಿನ. ಕ್ರಾಂತಿಕಾರಿಗಳ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಹಗಲಿರುಳು ಹೊಂಚು ಹಾಕುತಿದ್ದ ಬ್ರಿಟಿಷರ ಬಯಕೆಯು ಅಂದು ಈಡೇರಿದಂತಾಯಿತು. ಬೇಸರಗೊಂಡ ಭಾಸ್ಕರನು ಪಡುಗಡಲಿನೊಡಲಲ್ಲಿ ಕಂತಿ ಲಾಹೋರಿನ ನಗರದಲ್ಲೆಲ್ಲಾ ಮುಚ್ಚಂಜೆಯು ಕವಿಯುತಿತ್ತು. ಅಷ್ಟರಲ್ಲಿ ಫಾಶಿ ಶಿಕ್ಷೆ ವಿಧಿಸಲ್ಪಟ್ಟ ಭಗತ್ ಸಿಂಘ್, ಸುಖದೇವ, ರಾಜಗುರು ಈ ಮೂವರನ್ನು ಜೈಲಿನ ಅಧಿಕಾರಿಗಳು ವಧ್ಯಸ್ಥಾನಕ್ಕೆ ಕರೆದೊಯ್ದರು. 'ಕ್ರಾಂತಿಯು ಚಿರಕಾಲ ಬಾಳಲಿ' ಮತ್ತು 'ಬಂಡವಾಳಶಾಹಿತನವು ನಾಶವಾಗಲಿ' ಎಂಬ ಜಯಘೋಷಗಳನ್ನು ಹಾಡುತ್ತಾ, ಈ ಮೂವರು ಕ್ರಾಂತಿವೀರರು ವಧ್ಯಪೀಠವನ್ನೇರಿ, ಕತ್ತನ್ನಿತ್ತರು. ತನ್ನ ವೀರಸತ್ಪುತ್ರರಾದ ಈ ಕ್ರಾಂತಿಕಂಠೀರವರನ್ನು ಕಳಕೊಂಡ ಭಾರತಮಾತೆಯು ತನುಸೊರಗಿ ಬಡವಾದಳು.

ಭಗತ್ ಸಿಂಘನ ಬಲಿದಾನದಿಂದ ಭಾರತದ ರಾಜಕೀಯಾಕಾಶದಲ್ಲಿ ಕ್ರಾಂತಿತಾರೆಗಳು ಉಲ್ಕೆಗಳಂತೆ ಅಳಿದು ಹೋದುವು. ಸ್ವಾತಂತ್ರ್ಯಸಂಗ್ರಾಮದ ರೂಪವು ಬದಲಾಗಿ ಗಾಂಧಿಜಿಯವರ ನೇತೃತ್ವದಲ್ಲಿ ಅಹಿಂಸಾತ್ಮಕರೀತಿಯ ಹೊಸದಾರಿಯನ್ನು ಹಿಡಿಯಿತು. ಭೂಗತಚಟುವಟಿಕೆ, ಕ್ರಾಂತಿ ಉತ್ಕ್ರಾಂತಿಗಳು ಹೇಳಹೆಸರಿಲ್ಲದಂತಾದುವು. ಆದರೆ ಭಗತ್ ಸಿಂಘನು ದೇಶದ ತರುಣರ ಹೃದಯದಿಂದ ಅಳಿಯಲಿಲ್ಲ. ಮುಂದೆ ಕೊಂಗ್ರೆಸ್ಸಿನವರೇ ಆದ ಸುಭಾಸ್‌ಚಂದ್ರ ಬೋಸರು ಭಗತ್ ಸಿಂಘನು ಹಾಕಿ

ಕೊಟ್ಟ ದಾರಿಯನ್ನು ಹಿಡಿದು ಸಶಸ್ತ್ರಕ್ರಾಂತಿಗೆ ಧುಮುಕಿದರು. ಇಂದಿಗೂ ಭಗತ್ ಸಿಂಘನು ಭಾರತದ ತರುಣಪೀಳಿಗೆಗೆ ಹೃದಯದಲ್ಲಿ ಕಥಾನಾಯಕ ನಂತಿದ್ದಾನೆ. ಧೈರ್ಯಸ್ಥೈರ್ಯಗಳ ಪ್ರತಿಮೂರ್ತಿಯಾಗಿ ವಿರಾಜಿಸುತಿದ್ದಾನೆ. ಜಡವಾದ ಅವರ ದೇಹದಲ್ಲಿ ನವಜೀವನಕಳೆಯನ್ನು ತುಂಬಿಸುವ ವೀರಮಾರ್ತಾಂಡನಾಗಿದ್ದಾನೆ.

Edited, Printed & Published by K. V. Shenoy
at The Prabhat Printers, Ltd., Mangalore.